# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 07–05–2021 ರಂದು ಬೆಳಿಗ್ಗೆ 11.00 ಗಂಟೆಗೆ, ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಆದೇಶದಂತೆ, ವಸಂತನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಅಧ್ಯಕ್ಷತೆಯಲ್ಲಿ ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡಾವಳಿ:–

ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು

| ಕ್ರ.ಸಂ | ಹೆಸರು | ಸಮಿತಿ ಸಭೆಯ |
|---|---|---|
| 1 | ಶ್ರೀಮತಿ. ಆರ್. ಮಂಜುಳಮ್ಮ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ | ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| 3 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 4 | ಶ್ರೀಮತಿ. ಪ್ರಿಯಚೆಟ್ಟಿ ರಾಜ್ ಗೋಪಾಲ್ | ಸಮಿತಿ ಸದಸ್ಯರು |
| 5 | ಶ್ರೀ ಭಾನು ಪ್ರಕಾಶ್ | ಸಮಿತಿ ಸದಸ್ಯರು |
| 6 | ಶ್ರೀ ಮಹಮದ್ ಅಲಿ | ಡಾಕ್ಟರ್ |
| 7 | ಶ್ರೀ ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 8 | ಶ್ರೀ ನಾಗೇಂದ್ರ | |
| 9 | ಶ್ರೀ. ಕೀರ್ತಿ | ಮಾರ್ಷಲ್ |
| 10 | ಶ್ರೀ. ಜಯರಾಜು | ಕೆಲಸ ಪರಿವೀಕ್ಷಕರು |
| | <u>ಗೈರುಹಾಜರಾದವರು</u> | |
| 01 | ಪ್ರಕಾಶ್‌ಚಂದ್ ಪಿರಿಗಲ್ | ಸಮಿತಿ ಸದಸ್ಯರು |
| 02 | ಶ್ರೀಮತಿ ಜನನಿ | ಸಮಿತಿ ಸದಸ್ಯರು |
| 03 | ಶ್ರೀ ವಾಸು | ಕಾರ್ಯಪಾಲಕ ಅಭಿಯಂತರರು |
| 04 | | ತೋಟಗಾರಿಕೆ ಅಧಿಕಾರಿಗಳು |
| 05 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 06 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 07 | ಶ್ರೀ ಮೂರ್ತಿ | ಕಂದಾಯ ವಸೂಲಿಗಾರರು |
| 08 | ಶ್ರೀ ಜಯರಾಜ್ | ಪರಿವೀಕ್ಷಕರು |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಸಭೆಗೆ ಎಲ್ಲರನ್ನು ಸ್ವಾಗತಿಸುತ್ತಾ ಹಿಂದಿನ ಸಭೆಯ ನಡವಳಿಗಳನ್ನು ಸಭೆಗೆ ಮಂಡಿಸುತ್ತಾ ಈ ಸಭೆಯಲ್ಲಿನ ವಿಷಯಗಳನ್ನು ಚರ್ಚಿಸುತ್ತಾ ಸಲಹೆಗಳನ್ನು ನೀಡಲು ಸದಸ್ಯರಲ್ಲಿ ತಿಳಿಸಿದರು.

ಸಮಿತಿ ಸದಸ್ಯರಾದ ಶ್ರೀಮತಿ ಚಿತ್ರ ವೆಂಕಟೇಶ್ ರವರು ವಾರ್ಡ್–93ಗೆ ಸಂಬಂಧಿಸಿದಂತೆ ಪ್ರಸ್ತುತ ಸಾಲಿನ ವಾರ್ಡ್ ಬಜೆಟ್ ಮತ್ತು ಕೈಗೊಳ್ಳಬೇಕಾದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದರು. ಮುಂದಿನ ಸಭೆಗೆ ಸ್ಮಾರ್ಟ್ ಸಿ.ಟಿಗೆ ಸಂಬಂಧಿಸಿದಂತೆ ಬಿ.ಎಂ.ಆರ್.ಸಿ.ಎಲ್ ಅಧಿಕಾರಿಗಳು ಹಾಜರಿರುವಂತೆ ತಿಳಿಸಿದರು ಹಾಗೂ ಪೌರಕಾರ್ಮಿಕರಿಗೆ ವ್ಯಕ್ಸಿನ್ ನೀಡುವಂತೆ ವ್ಯವಸ್ಥೆ ಮಾಡಲು ಸಭೆಗೆ ತಿಳಿಸಿದರು.

ವಾರ್ಡ್–93ಗೆ ಸಂಬಂಧಿಸಿದಂತೆ ಪ್ರಸ್ತುತ ಸಾಲಿನ ಬಜೆಟ್ ವಿಚಾರವನ್ನು ಕೇಂದ್ರ ಕಛೇರಿಯಿಂದ ತಿಳಿದು ನೀಡುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

ಸಮಿತಿ ಸದಸ್ಯರಾದ ಶ್ರೀ ರಜ್‌ದುರ್ಗ ರವರು ವಸಂತನಗರ ಪಿ.ಹೆಚ್.ಸಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾಕ್ಟರ್ ಹಾಗೂ ಸಿಬ್ಬಂದಿ ವರ್ಗದವರನ್ನು ಅಭಿನಂದಿಸುತ್ತಾ ಪ್ರಸ್ತುತ ಲಸಿಕೆ ವಿವರಗಳನ್ನು ಹಾಗೂ ಕೋವಿಡ್ ಸಂಬಂಧ ವಿಚಾರಗಳನ್ನು ಧೀರ್ಘವಾಗಿ ಡಾ॥ ಅಲಿರವರೊಂದಿಗೆ ಚರ್ಚಿಸಿದರು. ಹಾಗೂ ವಾರ್ಡ್–93ಗೆ ಸಂಬಂಧಿಸಿದ ವಿವಿಧ ಕಾಮಗಾರಿಗಳು ಸುಮಾರು ಆರು ತಿಂಗಳಿಂದ ಪೂರ್ಣಗೊಳಿಸದೆ ಬಾಕಿ ಇಟ್ಟಿರುವುದರಿಂದ ಅಸಮಾಧಾನ ವ್ಯಕ್ತ ಪಡಿಸಿ ಆದಷ್ಟು ಶ್ರೀಘ್ರವಾಗಿ ಬಗೆಹರಿಸಲು ಸಭೆಗೆ ತಿಳಿಸಿದರು.

ವಸಂತನಗರ ಪಿ.ಹೆಚ್.ಸಿ ಯ ಡಾಕ್ಟರ್ ಅಲಿರವರು ಸುಧೀರ್ಘವಾಗಿ ಕೋವಿಡ್ ಲಸಿಕೆ ಹಾಗೂ ಕೋವಿಡ್ ನಿಯಂತ್ರಣದ ಬಗ್ಗೆ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸುತ್ತಾ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರುಗಳಾದ ಭಾನುಪ್ರಕಾಶ್, ಶ್ರೀಮತಿ ಪ್ರಿಯಾಚೆಟ್ಟಿ ರಾಜ್‌ಗೋಪಾಲ್, ಶ್ರೀಮತಿ ಚಿತ್ರ ವೆಂಕಟೇಶ್ ಹಾಗೂ ಶ್ರೀ ರಾಜ್ ದುಗ್ಗಾರ್ ರವರ ಪ್ರಶ್ನೆಗಳಿಗೆ ಉತ್ತರಿಸಿ ಮುಂದಿನ ದಿನಗಳಲ್ಲಿ ಲಸಿಕೆ ಪ್ರಮಾಣವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀಮತಿ ಪ್ರಿಯಾ ಚೆಟ್ಟಿ ರಾಜ್‌ಗೋಪಾಲ್ ಇವರು ಸಭೆಗೆ ತಿಳಿಸುತ್ತಾ ಪ್ರೆಸ್ಟೀಜ್ ಗ್ರೂಪ್ ರವರು ಅಪಾರ್‌ಮೆಂಟ್ ನಿರ್ಮಿಸುತ್ತಿದ್ದು ಸದರಿ ರೋಡಿನಲ್ಲಿ ಅಪಾರ್‌ಮೆಂಟ್ ನಿರ್ಮಿಸಲು ಬೇಕಾದ ವಸ್ತುಗಳನ್ನು ರೋಡಿನಲ್ಲಿಯೇ ಶೇಖರಿಸಿ ಇಟ್ಟುಕೊಂಡಿದ್ದು ಇದರಿಂದ ವಾಹನ ಮತ್ತು ಒಡಾಡುವ ಜನರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ಸದರಿ ವಸ್ತುಗಳನ್ನು ತೆರುವುಗೊಳಿಸುವಂತೆ ಕ್ರಮಕೈಗೊಳ್ಳಲು ಸೂಚಿಸಿದರು.

ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಶ್ರೀ ರಾಜ್ ಶೇಖರ್ ರವರಿಗೆ ಪ್ರೆಸ್ಟೀಜ್ ಗ್ರೂಪ್‌ರವರ ದೂರವಾಣಿ ಮೂಲಕ ಸಂಪರ್ಕಿಸಿ ರಸ್ತೆಯಲ್ಲಿ ಶೇಖರಿಸಿರುವ ವಸ್ತುಗಳನ್ನು ಶೀಘ್ರವಾಗಿ ತೆರವುಗೊಳಿಸಲು ಸೂಚಿಸಲು ಹೇಳಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೋವಿಡ್ ಲಾಕ್ ಡೌನ್‌ನಿಂದ ವಾರ್ಡ್ ಕಾಮಗಾರಿಗಳ ದುರಸ್ಥಿ ವಿಳಂಬವಾಗಿದ್ದು, ಲಾಕ್ ಡೌನ್ ಅವಧಿ ಮುಗಿದ ನಂತರ ಗುತ್ತಿಗೆದಾರರಿಂದ ಕಾರ್ಯ ನಿರ್ವಹಿಸಲ್ಪಡುವುದಾಗಿ ಸಭೆಗೆ ತಿಳಿಸಿದರು.

ಬೆಳಗಿನ ಸಮಯದಲ್ಲಿ ಕೆಲವೊಂದು ಜನರು ವಾಕಿಂಗ್ ಹಾಗೂ ಜಾಗಿಂಗ್ ಮಾಡುತ್ತಿರಬೇಕಾದರೆ ಮಾಸ್ಕ್‌ನ್ನು ಹಾಕುತ್ತಿರುವುದಿಲ್ಲ ಈ ಬಗ್ಗೆ ಮಾರ್ಷಲ್ ರವರು ಮಾಸ್ಕ್ ಧರಿಸುವಂತೆ ಜನರಿಗೆ ಅರಿವು ಮೂಡಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸ ಬೇಕಾಗಿ ಶ್ರೀಮತಿ ಚಿತ್ರ ವೆಂಕಟೇಶ್ ರವರು ಸಭೆಗೆ ತಿಳಿಸಿದರು.

ಈ ಬಗ್ಗೆ ಪ್ರತಿದಿನ ಕ್ರಮ ಕೈಗೊಳ್ಳುತ್ತಿರುವುದಾಗಿ ಶ್ರೀ ಕೀರ್ತಿ ಮಾರ್ಷಲ್ ಹಾಗೂ ನಾಗೇಂದ್ರ ರವರು ತಿಳಿಸಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

R. [signature]
ನೋಡಲ್ ಅಧಿಕಾರಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

[signature]
ಸದಸ್ಯ ಕಾರ್ಯದರ್ಶಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:–

6. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
7. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
8. ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
9. ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.

ಕಾಇಪ್ರ/ಡಿ.ಸಿ.ನ/ವಾ-93-ವಸ/2021-22    ದಿನಾಂಕ : 13/05/2021

– ವಾರ್ಡ್ – ಸಮಿತಿ ಸಭೆ – ಸೂಚನಾ ಪತ್ರ.

ವಾರ್ಡ್-93 ವಸಂತನಗರದ ವಾರ್ಡ್-ಸಮಿತಿ ಸಭೆಯನ್ನು ನೋಡಲ್ ಅಧಿಕಾರಿ ಗಳವರ ಅಧ್ಯಕ್ಷತೆಯಲ್ಲಿ ದಿನಾಂಕ 17.5.2021 ರಂದು ಬೆಳಿಗ್ಗೆ 11.0 ಗಂಟೆಗೆ ವಾರ್ಡ್ ಕಛೇರಿಯಲ್ಲಿ ಕರೆಯಲಾಗಿರುತ್ತದೆ. ಸಮಿತಿ ಸಭೆಗೆ ಹಾಜರಿದ್ದು ಸಲಹೆ ಸೂಚನೆಗಳನ್ನು ನೀಡಲು ಸಮಿತಿ ಸದಸ್ಯರಲ್ಲಿ ಅಧ್ಯಕ್ಷರಲ್ಲಿ ಕೋರಲಾಗಿದೆ.

ವಂದನೆಗಳೊಂದಿಗೆ

S. N. Rajshekar
13/5/2021
(ಸಮಿತಿ ನೋಡಲ್ ಅಧಿಕಾರಿ)

ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ.

ವಿಷಯ ಸೂಚಿ

1. WDC, ಪ್ರಾರಂಭೋತ್ಸವ, ವಾರ್ಡ್ ಸಭೆ ನಡೆಸುವ ಬಗ್ಗೆ ಚರ್ಚೆ
2. ಕೋವಿಡ್-19 ರ ನಿಯಂತ್ರಣ, ನಿರ್ವಹಣೆ ಚರ್ಚೆ
3. ಇತರ ವಾರ್ಡ್ ಸಂಬಂಧಿತ ವಿಷಯಗಳು.